ತಾರೀಖು 30ನೆ ಸೆಪ್ಟಂಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಸರ್ಕಾರದ ಆಡಳಿತದಲ್ಲಿರುವ ಸ್ಟೇಟ್ ಫಾರೆಸ್ಟ್ ರಿಜರ್ವ್ಡ್ ಜಮೀನು ಮತ್ತು ಪ್ಲಾಂಟೇಷನ್‌ಗಳ ದೇಖರೇಖಿಲು ಎಲ್ಲಾ ಜಮೀನುಗಳಲ್ಲಿಯೂ 1906—07ನೆ ಸಾಲಿನಲ್ಲಿ ದೊರಿಯುವ ಈ ಕೆಳಗೆ ಕಂಡ ಪಸಾರೆ ಜಿನಸುಗಳನ್ನು ತಾಲ್ಲೂಕ್‌ವಾರ್, ಹೋಬಳಿವಾರ್, ಜಂಗಲ್‌ವಾರ್, ಅಥವಾ ಮತ್ಯಾವರೀತಿಯಲ್ಲಾದರೂ ರೇಂಜ್ ಫಾರೆಸ್ಟ್ ಆಫಿಸರವರು ಈ ಕೆಳಗೆ ಪಟ್ಟಿಯಲ್ಲಿ ನಮೂದಿರುವ ಸ್ಥಳಗಳಲ್ಲಿ ಆಯಾಯ ತಾರೀಖಿನಲ್ಲಿ ತಾಲ್ಲೂಕು ಅಮಲ್‌ದಾರ್‌ರವರು ಜೊತೆಯಲ್ಲಿ ಹರಾಜು ಮಾಡಿಸುತ್ತಾರೆ. ನಿಯಮಕವಾದ ದಿನವು ಹರಾಜು ಮಧ್ಯಾಹ್ನ 12 ಘಂಟೆಗೆ ಶುರು ಮಾಡಲ್ಪಡುವುದು :—

ನಂಬರು.	ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಮಾಡುವ ಸ್ಥಳ.
1	ಮಾಲೂರ	18ನೆ-ಅಕ್ಟೋಬರ್ 1907.	ತಾಲ್ಲೂಕು ಕಛೇರಿ.
2	ಕೋಲಾರ	19 ಡಿಟೋ	
3	ಮುಳಬಾಗಲು	21 ಡಿಟೋ	
4	ಬವರಿಂಗ್‌ಪ್ಯಾಟೆ	22 ಡಿಟೋ	
5	ಶ್ರೀನಿವಾಸಪುರ	23 ಡಿಟೋ	
6	ಚಿಂತಾಮಣಿ	24 ಡಿಟೋ	
7	ಕಿಡ್ಲ ಘಟ್ಟ	25 ಡಿಟೋ	
8	ಚಿಕ್ಕಬಳ್ಳಾಪುರ	26 ಡಿಟೋ	
9	ಗೋರಿಬಿದನೂರು	28 ಡಿಟೋ	
10	ಗುಡಿಬಂಡೆ ಸಬ್ ತಾಲ್ಲೂಕು	29 ಡಿಟೋ	
11	ಬಾಗೇಪಲ್ಲಿ	30 ಡಿಟೋ	

ಪಸಾರೆ ದಿನಸುಗಳ ತಪಸೀಲು:

1. ಹುಣಸೇಹಣ್ಣು
2. ಹೊಂಗೇಕಾಯಿ
3. ಕೀಗೇಕಾಯಿ
4. ಗೋಂದು
5. ಜೇನುತುಪ್ಪ
6. ಜೇನುಮೇಣ
7. ಕಪಿಲಾರಂಗು
8. ಗೇರುಬಪ್ಪು
9. ಬ್ಯಾಲದಹಣ್ಣು
10. ಕಲ್ಲುಹುವ್ವು
11. ಮರದೀ ಬೀಜ ಅಥವಾ ಚಾರುಬಪ್ಪು
12. ತಾರೇಕಾಯಿ
13. ಪೊಪ್ಪಳಚಕ್ಕೆ
14. ಅಳಲೇಕಾಯಿ

ಪರಾದಲ್ಲಿಲ್ಲದ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿ ದೊರಿಯಬಹುದಾದ 1—2—3ನೆ ನಂಬರು ದಿನಸುಗಳು ಅವಶ್ಯಕವಿದ್ದಲ್ಲಿ ಅಲಾಹಿದಾ ಹರಾಜು ಮಾಡಿಸಲ್ಪಡುವವು.

2. ಛಡ ಸವಾಲ್‌ದಾರನು ಹರಾಜು ಖೈದಾದ ಕೂಡಲೆ ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನು ಪಾವತೀ ಮಾಡಬೇಕು. ತಪ್ಪಿದರೆ ಛಡ ಸವಾಲ್ದಾರನನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುಸರಾ ಹರಾಜು ಮಾಡಿಸಲ್ಪಡುವದು. ದುಸರಾ ಹರಾಜಿನಲ್ಲಿ ಛಡ ಸವಾಲ್ ಮೊಬಲಗು ಕಮ್ಮಿಯಾಗಿದ್ದಲ್ಲಿ ಕಮ್ಮಿಯಾಗುವ ಮೊಬಲಗನ್ನು ಅವನಿಂದ ರವಿನ್ಯೂ ಬಾಕಿಯಂತೆ ಭಾವಿಸಿ ವಸೂಲ್ ಮಾಡಲ್ಪಡುವದು. ಆದರೆ ದುಸರಾ ಹರಾಜಿನಲ್ಲಿ ಫಾಯಿದೆ ಉಂಟಾದ್ದಲ್ಲಿ ಅದಕ್ಕೆ ಅವನಿಗೆ ಯಾವ ಹಕ್ಕೂ ಇರುವದಿಲ್ಲ. ಹರಾಜು ಮಂಜೂರಾದ ಸಂಗತಿಯನ್ನು ಛಡ ಸವಾಲ್ದಾರನಿಗೆ ತಿಳಿಯಪಡಿಸಿದ ಬಂದು ವಾರದೊಳಗಾಗಿ ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದರೆ ಮೊದಲು ಜೇವಣಿ ಕಟ್ಟಿದ ಕಾಲು ಹಿಸ್ಸೆಯನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಬಾಬು ದುಸರಾ ಹರಾಜು ಮಾಡಲ್ಪಡುವದಲ್ಲದೆ ಛಡ ಸವಾಲ್ದಾರನಿಗೆ ಬಾಬಿನಲ್ಲಿ ಯಾವ ಹಕ್ಕೂ ಇರುವದಿಲ್ಲ. ಪೂರಾ ಹಣ ಪಾವತಿ ಮಾಡಿದ ನಂತರ ಹರಾಜು ವೇಳೆಯಲ್ಲಿ ತಿಳಿಸಲ್ಪಡುವ ಕೆಲವು ಷರತ್ತುಗಳನ್ನು ನಮೂದಿಸಿ ಛಡ ಸವಾಲ್ದಾರನು ಮುಚ್ಚಳಿಕೆ ಬರೆದುಕೊಟ್ಟು ಹೊರ್ತು ಬಾಬನ್ನು ರೂಢಿಸಲು ಅವನಿಗೆ ಅಪ್ಪಣೆ ದೊರಿಯಲಾರದು. ಹರಾಜು ಮೊಬಲಗಿನ ಮೇಲೆ ರೂಪಾಯಿ ಬಂದಕ್ಕೆ ಬಂದಾಣಿಯಂತೆ ಲೋಕಲ್ ಸೆಸ್ ಪಾವತಿ ಮಾಡಬೇಕು.

3. ಈ ಹರಾಜು ಫಾರೆಸ್ಟು ಇಲಾಖೆಯಲ್ಲಿ ಡೆಪ್ಯೂಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಬಳಪಟ್ಟು ಇರುತ್ತೆ.

4. ಹಿಂದುವಳಿ ಜಮೀನಾಗಿನಲ್ಲಿ ಸ್ವಂತ ತೋಪುಗಳಲ್ಲಿಯೂ ಇರುವ ಫಸಲ್ ಕಂಟ್ರಾಕ್ಟರಿಗೆ ಸೇರಿದ್ದಲ್ಲ.

5. ಇನಾಂದಾರ್ರ ಹಕ್ಕಿನಲ್ಲಿ ಕಂಟ್ರಾಕ್ಟರು ಪ್ರವೇಶ ಮಾಡಕೂಡದು.

6. ಗ್ರಾಮ ಠಾಣಾಗಳಲ್ಲೂ, ಗ್ರಾಮ ತೋಪುಗಳಲ್ಲೂ, ಸ್ಮಶಾನ ಜಾಗಾಗಳಲ್ಲಿಯೂ ಮತ್ತು ರಸ್ತೆ ಸಾಲು ಮರಗಳಲ್ಲಿಯೂ ಇರುವ ಫಸಲು ಈ ಹರಾಜಿಗೆ ಸೇರಿದ್ದಲ್ಲಿ ಅವು ಅಮಲ್ದಾರ್ರುಗಳಿಂದ ರವಿನ್ಯೂ ಇಲಾಖೆ ಬಗ್ಯಾಗಿ ಅಲಾಹಿದಾ ಹರಾಜು ಮಾಡಲ್ಪಡುವವು.

7. ಫಸಲನ್ನು ರೂಢಿಸುವ ನೆಪದಮೇಲೆ ಇಜಾರೆದಾರನು ಮರಗಳನ್ನು ನಾಶಪಡಿಸಕೂಡದು.

8. ಹರಾಜು ಮಾಡಲ್ಪಟ್ಟ ದಿನಸುಗಳ ವಿನಹಾ ಮತ್ಯಾವ ದಿನಸುಗಳನ್ನೂ ಇಜಾರೆದಾರನು ರೂಢಿಸಕೂಡದು.

9. 1908ನೆ ಜನವರಿ ಆಖೈರೊಳಗಾಗಿ ಹದ್ದುಬಸ್ತು ಗೊತ್ತಾಗಿರುವ ಫಾರೆಸ್ಟುಗಳಲ್ಲಿನ ಮತ್ತು ಪ್ಲಾಂಟೇಷನ್‌ಗಳಲ್ಲಿನ ಫಸಲನ್ನು ಸಾಗಿಸಿಕೊಂಡು ಹೋಗಬೇಕು. ಅವುಗಳು ಬೆಂಕಿ ತಡೆ ಬಗ್ಯಾಗಿ ಆ ತಾರೀಖು ಲಾಗಾಯಿತು ಬಂದ್ ಮಾಡಲ್ಪಡುವವು. ಇತರಕಡೆಯಲ್ಲಿನ ಫಸಲುಗಳನ್ನು 1908ನೆ ಜೂ ಆಖೈರ್ ವರಿವಿಗೂ ಕಂಟ್ರಾಕ್ಟರು ರೂಢಿಸಿಕೊಳ್ಳಬಹುದು.

10. ಜಿನಸುಗಳನ್ನು ರೂಢಿಸುವದಕ್ಕೆ ಆಗಲೀ ಅಥವಾ ಮತ್ಯಾವ ಸಬಬಿನಿಂದಲೇ ಆಗಲೀ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳಿಗೆ ಬೆಂಕಿ ಇಡಕೂಡದು.

11. ಹರಾಜಿನಲ್ಲಿ ಸರಿಯಾದ ಸವಾಲ್ ಬಾರದಿದ್ದರೆ ಹರಾಜು ಮಾಡುವ ಆಫಿಸರು ಹರಾಜನ್ನು ಖೈದು ಮಾಡುವದಕ್ಕಾಗಲಿ ಆ ಮುಂದೆ ಹರಾಜು ಮಾಡುವದಕ್ಕಾಗಲೀ ಸ್ವತಂತ್ರರಾಗಿರುತ್ತಾರೆ.

ಎಸ್. ಎ. ಬಾಪುರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.